ಅಂತರ್ಜಾಲ : https://kptcl.karnataka.gov.in

ಇ-ಮೇಲ್ ವಿಳಾಸ: admin@kptcl.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009.

ಸಂಖ್ಯೆ:ಕವಿಪ್ರನಿನಿ/ಮದೂನಿಸ/ಬಿ123/ 22390

ದಿನಾಂಕ: 31/1/2022

## ಸುತ್ತೋಲೆ

ಕೆಲಸದ ಸ್ಥಳದಲ್ಲಿ ತಾರತಮ್ಯ ರಹಿತ ವಾತಾವರಣ ಕಲ್ಪಿಸಲು, ಮೂಲಭೂತ ಹಕ್ಕುಗಳ ರಕ್ಷಣೆಗಾಗಿ, ಔದ್ಯೋಗಿಕ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಮತ್ತು ಈ ಮೂಲಕ ಆರ್ಥಿಕ ಸಬಲೀಕರಣ ಮತ್ತು ಅಭಿವೃದ್ಧಿ ಸಾಧಿಸಲು, Prevention of Sexual Harrasment (PoSH) ಕಾಯಿದೆಯನ್ನು 2013 ರಲ್ಲಿ ಜಾರಿಗೊಳಿಸಲಾಯಿತು. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ (ತಡೆಯುವಿಕೆ, ನಿರ್ಬಂಧನೆ ಮತ್ತು ನಿವಾರಣೆ) ಕಾಯ್ದೆ 2013 ರ ಅನ್ವಯ ಕವಿಪ್ರನಿನಿ ಯಲ್ಲಿ ಮಹಿಳಾ ದೂರು ನಿವಾರಣಾ ಸಮಿತಿಯನ್ನು ರಚಿಸಲಾಗಿದೆ. PoSH ಕಾಯಿದೆಯಲ್ಲಿ ಈ ಸಮಿತಿಯನ್ನು ಆಂತರಿಕ ಸಮಿತಿಯೆಂದು ಹೆಸರಿಸಲಾಗಿದೆ.

ಸದರಿ ಕಾಯ್ದೆಯ ಅನ್ವಯ ಭಾದಿತ ಮಹಿಳೆಯು (ಖಾಯಂ/ ತಾತ್ಕಾಲಿಕ ಸೇವೆಯಲ್ಲಿರುವವರು) ಸಮಿತಿಗೆ ದೂರುಗಳನ್ನು ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮ ಮತ್ತು ತನಿಖಾ ಪದ್ಧತಿಯ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

1) ಭಾದಿತ ಮಹಿಳೆಯು ಘಟನೆ ನಡೆದ 3 ತಿಂಗಳೊಳಗಾಗಿ, ಘಟನೆಯು ಪುನರಾವರ್ತನೆಗೊಂಡಿದ್ದಲ್ಲಿ ಅಂತಿಮ ಘಟನೆ ಘಟಿಸಿದ
   3 ತಿಂಗಳೊಳಗಾಗಿ ಲಿಖಿತ ದೂರನ್ನು ಆಂತರಿಕ ಸಮಿತಿಗೆ ಸಲ್ಲಿಸಬೇಕು.
2) ದೂರನ್ನು 6 (ಆರು) ಪ್ರತಿಗಳಲ್ಲಿ ಸಮಿತಿಗೆ ಸಲ್ಲಿಸಬೇಕು.
3) ದೂರನ್ನು ಆಂತರಿಕ ಸಮಿತಿಯ ಅಧ್ಯಕ್ಷರಿಗೇ ಸಲ್ಲಿಸಬೇಕು. ದೂರನ್ನು ಉದ್ಯೋಗದಾತನಿಗೆ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
4) ಭಾದಿತ ಮಹಿಳೆಯು ದೈಹಿಕ ಅಥವಾ ಮಾನಸಿಕ ಅಸ್ವಸ್ಥತೆಯಿಂದ ದೂರು ಸಲ್ಲಿಸುವ ಸ್ಥಿತಿಯಲ್ಲಿಲ್ಲದ ಸಂದರ್ಭದಲ್ಲಿ, ಆ ಮಹಿಳೆಯ ಕಾನೂನುಬದ್ಧ ವಾರಸುದಾರ ಅಥವಾ ಹತ್ತಿರದ ಸಂಬಂಧಿ ದೂರನ್ನು ಸಮಿತಿಗೆ ಸಲ್ಲಿಸಬಹುದಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಆಂತರಿಕ ಸಮಿತಿಯು ಕಾರಣಗಳನ್ನು ದಾಖಲಿಸಿ ದೂರು ಸಲ್ಲಿಸುವ ಅವಧಿಯನ್ನು ಪುನಃ ಗರಿಷ್ಠ 3 (ಮೂರು) ತಿಂಗಳಿಗೆ ವಿಸ್ತರಿಸಬಹುದಾಗಿದೆ.
5) ದೂರಿನ ಜೊತೆಯಲ್ಲಿ ಸಾಕ್ಷಿದಾರರ ಪಟ್ಟಿ, ಲಭ್ಯವಿರುವ ಪುರಾವೆಗಳು ಮತ್ತು ಪೂರಕ ದಸ್ತಾವೇಜುಗಳನ್ನು ಸಮಿತಿಗೆ ಸಲ್ಲಿಸಬಹುದು.
6) ವಿಚಾರಣೆಯ ಸಮಯದಲ್ಲಿಯೂ ದೂರುದಾರರು ಮತ್ತು ಎದುರುದಾರರು ತಮ್ಮ ಹೇಳಿಕೆಗಳ ಸಮರ್ಥನೆಗೆ ಸಾಕ್ಷಿ, ಪುರಾವೆ, ದಾಖಲೆಗಳು ಹಾಗೂ ದಸ್ತಾವೇಜುಗಳನ್ನು ಸಮಿತಿಗೆ ಒದಗಿಸಬಹುದಾಗಿರುತ್ತದೆ.
7) ಸಮಿತಿಯ ಗೊತ್ತುಪಡಿಸಿದ ವಿಚಾರಣೆಯ ದಿನ ಹಾಗೂ ಸಮಯದಲ್ಲಿ ದೂರುದಾರರು ಮತ್ತು ಎದುರುದಾರರು ಖಡ್ಡಾಯವಾಗಿ ಹಾಜರಿರಬೇಕು.
8) ಸಮಿತಿಯ ಗೊತ್ತುಪಡಿಸಿದ ವಿಚಾರಣೆಯ ದಿನ ಹಾಗೂ ಸಮಯದಲ್ಲಿ ದೂರುದಾರ ಮಹಿಳೆಯು ಹಾಜರಾಗಲು 3 ಅವಕಾಶಗಳನ್ನು ಸಮಿತಿಯು ನೀಡಬಹುದಾಗಿದ್ದು 3 ಬಾರಿಯೂ ವಿಚಾರಣೆಗೆ ದೂರುದಾರ ಮಹಿಳೆಯು ಹಾಜರಾಗದಿದ್ದಲ್ಲಿ ಸಮಿತಿಯು ಸದರಿ ದೂರನ್ನು ರದ್ದು ಗೊಳಿಸಬಹುದಾಗಿರುತ್ತದೆ.
9) ದೂರುದಾರ ಮಹಿಳೆಯು **ಪುರುಷರಿಂದುಂಟಾದ ಲೈಂಗಿಕ ಕಿರುಕುಳಗಳ ಬಗೆಗಿನ ದೂರುಗಳನ್ನು ಮಾತ್ರ** ಆಂತರಿಕ ಸಮಿತಿಗೆ ಸಲ್ಲಿಸಬಹುದಾಗಿರುತ್ತದೆ. ಆಡಳಿತಾತ್ಮಕ ಕಿರುಕುಳಗಳ ಬಗೆಗಿನ ದೂರುಗಳು ಆಂತರಿಕ ಸಮಿತಿಯ ಪರಿಧಿಗೆ ಒಳಪಡುವುದಿಲ್ಲ.

10) ದೂರುದಾರ ಮಹಿಳೆಯು ಸಲ್ಲಿಸಿದ ದೂರು ಮಿಥ್ಯವೆಂದು ಸಾಬೀತಾದ ಪಕ್ಷದಲ್ಲಿ ದೂರುದಾರ ಮಹಿಳೆಯ ಮೇಲೆ ಉದ್ಯೋಗದಾತನು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

11) ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಮಹಿಳಾ ದೂರು ನಿವಾರಣಾ ಸಮಿತಿ/ ಆಂತರಿಕ ಸಮಿತಿಗೆ ದೂರು ಸಲ್ಲಿಸಬೇಕಾದ ಪಕ್ಷದಲ್ಲಿ ಈ ಸುತ್ತೋಲೆಯಲ್ಲಿ ತಿಳಿಸಿರುವ ಕ್ರಮಗಳನ್ನು ಅನುಸರಿಸುವುದು ಮತ್ತು ದೂರುಗಳನ್ನು ಮುಚ್ಚಿದ ಲಕೋಟೆಯಲ್ಲಿಟ್ಟು, ಲಕೋಟೆಯಮೇಲೆ "ಗೌಪ್ಯ" ವೆಂದು ಬರೆದು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿರುತ್ತದೆ.

ವಿಳಾಸ:<br>
ಅಧ್ಯಕ್ಷರು,<br>
ಮಹಿಳಾ ನೌಕರರ ದೂರುನಿವಾರಣಾ ಸಮಿತಿ,<br>
ಕ.ವಿ.ಪ್ರ.ನಿ.ನಿ., ಕಾವೇರಿ ಭವನ,<br>
ಬೆಂಗಳೂರು-560009.

ಕವಿಪ್ರನಿನಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರೆಲ್ಲರೂ ಸಾಮರಸ್ಯ, ಸಹಮತದಿಂದ ಒಂದು ಕುಟುಂಬದವರಂತೆ ಕಾರ್ಯನಿರ್ವಹಿಸಿ, ಇಂತಹ ಪ್ರಕರಣಗಳು ಕವಿಪ್ರನಿನಿಯಲ್ಲಿ ಘಟಿಸದಂತೆ ಎಚ್ಚರಿಕೆ ವಹಿಸಬೇಕೆಂದು ಈ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ.

31/1/22

ಅಧ್ಯಕ್ಷರು,<br>
ಮಹಿಳಾ ನೌಕರರ ದೂರುನಿವಾರಣ ಸಮಿತಿ,<br>
ಕ.ವಿ.ಪ್ರ.ನಿ.ನಿ., ಕಾವೇರಿ ಭವನ,<br>
ಬೆಂಗಳೂರು-560009.

ಗೆ,

1. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
3. ಹಿರಿಯ ಆಪ್ತಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in for information of:

4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪಲೆಕ್ಕನಿಯಂತ್ರಣಾದಿಕಾರಿಗಳು, ಕವಿಪ್ರನಿನಿ.
6. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.